ಬರುತ್ತೆ? ಪೊಲೀಸರು ಅವರ್ಯಾರೊ ರೌಡಿಗಳನ್ನ ಹಿಡಿತಾರೆ. ನಾನು ನಮ್ಮ ಮನೆಯವರೆಲ್ಲ ಕೋರ್ಟ್ ಕಚೇರಿ ಅಂತ ಅಲೆಯಬೇಕು. ಅದಕ್ಕಾಗಿ ಸಾಕಷ್ಟು ಶ್ರಮ ಪಡಬೇಕು. ಆ ಶ್ರಮಾನ ಬೇರೆ ಒಳ್ಳೇ ವಿಷಯಕ್ಕೆ ತೊಡಗಿಸಿದರೆ ಏನಾದರೂ ಒಳ್ಳೇದು ಆಗಬಹುದಲ್ಲ?' ಎಂದಳು. ನಾನು ದಮಯಂತಿಯ ಮಾತುಗಳಿಗೆ ತಲೆ ತೂಗುತ್ತ ಅವಳನ್ನೇ ನೋಡುತ್ತಾ ಇದ್ದುಬಿಟ್ಟೆ. ಬಹುಶಃ ಇದೂ ಕೂಡ ತಲೆಮಾರುಗಳ ಅಂತರವೇ ಇರಬೇಕು. ಮಹಾಭಾರತದಲ್ಲಿ ದಾಯಾದಿಗಳ ಮಧ್ಯೆ ನಡೆಯುವ ಕ್ಷುಲ್ಲಕ ವಿಷಯಗಳಿಗೆ ತಲತಲಾಂತರಗಳವರೆಗೂ ಯುದ್ಧಗಳು ನಡೆದವು. ಲಕ್ಷಾಂತರ ಜನರು ಸತ್ತರು. ಕೊನೆಗೆ ಉಳಿದಿದ್ದೇನು? ಏನೂ ಇಲ್ಲ.

ಸಮಯ ರಾತ್ರಿ ಮೂರು ಗಂಟೆ. ಅಂದರೆ ಮೂರನೇ ಜಾವ. ಕೆಲವರು ನನ್ನ ದೇಹದ ಮುಂದೆ ಕುರ್ಚಿಗಳಲ್ಲಿ ತೂಕಡಿಸುತ್ತಿದ್ದರೆ ಕೆಲವರು ಎಚ್ಚರಿಕೆಯಿಂದಲೇ ಕುಳಿತಿದ್ದು ನನಗೆ ಎಲ್ಲರೂ ಬಟ್ಟೆ ತೊಟ್ಟು ಕುಳಿತಿರುವ ದೆವ್ವಗಳಂತೆ ಕಾಣಿಸುತ್ತಿದ್ದರು. ಕೆಲವರು ಹೆಣದ ಮುಂದೆ ಕುಳಿತುಕೊಂಡು ನಿದ್ದೆಗೆ ಜಾರಿದರೆ ಏನು ಗ್ರಹಚಾರವೊ ಎಂದು ನಿದ್ದೆ ಒತ್ತರಿಸಿ ಬರುತ್ತಿದ್ದರೂ ಕಣ್ಣುಗಳನ್ನು ತೆರೆದುಕೊಂಡೇ ಕುಳಿತಿದ್ದರು. ಕೆಲವರಿಗೆ ಸತ್ತು ಬಿದ್ದಿರುವ ನಾನು ಎಲ್ಲಿ ದೆವ್ವವಾಗಿ ಅವರ ದೇಹದೊಳಕ್ಕೆ ಸೇರಿಕೊಂಡು ಬಿಡುತ್ತೇನೊ ಎಂಬ ಭಯ. ಅದೂ ಕೂಡ ರಾತ್ರಿಯ ಹೊತ್ತು ಒಂದು ಹೆಣದ ಮುಂದೆ ರಾತ್ರಿಯೆಲ್ಲ ಕುಳಿತುಕೊಳ್ಳುವುದು ಅಷ್ಟು ಸುಲಭದ ಕೆಲಸವಲ್ಲ. ಇನ್ನು ನನ್ನ ಮುಂದೆ ಗುಂಪಾಗಿ ಒಂದೇ ಕಡೆ ಕುಳಿತುಕೊಂಡು ಮೂರು ಸಲ ಬ್ರ್ಯಾಂಡಿ/ರಮ್ಮು/ಸಾರಾಯಿ ಎಲ್ಲವನ್ನು ಕುಡಿದರೂ ದೇಹಗಳು ಚಳಿಗೆ ತಣ್ಣಗಾಗಿ ಹಾಡಲಾರದೆ ಹಾಡುತ್ತಿದ್ದಾರೆ. ಕೆಲವರ ಬಾಯಿಗಳಿಂದ ಹಾಡುಗಳು ಅರ್ಧಂಬರ್ಧ ತುಂಡು ತುಂಡು ಪದಗಳಾಗಿ ಕತ್ತರಿಸಿಕೊಂಡು ಹೊರ ಬೀಳುತ್ತಿವೆ.



ಕೆಲವರು ಮಧ್ಯೆಮಧ್ಯೆ ಒಂದೊಂದು ಗೊರಕೆ ಎಳೆದು ಹಿಂದಕ್ಕೆ ಇಲ್ಲ ಮುಂದಕ್ಕೆ ಬೀಳುತ್ತಿದ್ದಾರೆ. ಇನ್ನೂ ಕೆಲವರು ಗಾಳಿಗೆ ತೂರಾಡುವ ಗಿಡಗಳಂತೆ ನಿದ್ದೆಯಲ್ಲಿ ತೂರಾಡುತ್ತಿದ್ದಾರೆ. ಇಲ್ಲ ಓಲಾಡುತ್ತಿದ್ದಾರೆ. ಕೆಲವರು ಮನೆಯ ಗೋಡೆಗೆ ಒರಗಿಕೊಂಡು ಸ್ವಲ್ಪ ಆರಾಮಾಗಿ ಕುಳಿತಿದ್ದಾರೆ. ಉಳಿದವರು ಹಾಡುವವರ ಪಕ್ಕದಲ್ಲಿ ಕುಳಿತುಕೊಂಡು ಆಗಾಗ ಅವರನ್ನ ಹಿಗ್ಗಾಮುಗ್ಗಾ ಬೈಯ್ಯುತ್ತ, ತಿವಿಯುತ್ತಾ, ತಾವೂ ಅವರಿಂದ ತಿವಿಸಿಕೊಳ್ಳುತ್ತ ಹಾಡುವವರು ಎಲ್ಲಿ ನಿದ್ದೆ ಹೋಗಿಬಿಡುತ್ತಾರೆ ಎಂದು `ಏ, ಆಗೋಯ್ತು ಇನ್ನೇನು ಎರಡು ಗಂಟೆ ಹೊತ್ತು. ಹುಂಜ ಕೋಳಿಗಳೆಲ್ಲ ಕೂಗುವುದಕ್ಕೆ ಶುರು ಮಾಡಿಬಿಡುತ್ತೆ, ಸ್ವಲ್ಪ ಹೊತ್ತು ಬೆಳಕು ಹರಿದು ಬಿಡುತ್ತೆ, ಹಾಡಿಬಿಡ್ರಪ್ಪ' ಎನ್ನುತ್ತಿದ್ದಾರೆ. ಇದೆಲ್ಲವನ್ನು ನೋಡುತ್ತಿದ್ದ ನನಗೆ ಥೂಃ ಹೋಗಿಹೋಗಿ ಸಾಯಂಕಾಲ ಸತ್ತೋಗಿ ಇವರಿಗೆಲ್ಲ ತೊಂದರೆ ಮಾಡಿಬಿಟ್ಟೆನಲ್ಲ ಎಂಬ ಚಿಂತೆಯಾಗುತ್ತಿದೆ. ಆದರೆ ನಾನು ನಿಜವಾಗಿಯೂ ಸಾಯಲಿಲ್ಲ! ಯಾರಿಗೆ ಹೇಳಲಿ? ಏನೆಂದು ಹೇಳಲಿ? ನನ್ನಿಂದ ಏನೂ ಮಾಡಲು ಆಗುತ್ತಿಲ್ಲ. ಇರ್ಲಿ ನಾಳೆ ನನ್ನನ್ನ ತೆಗೆದುಕೊಂಡು ಹೋಗಿ ಮಣ್ಣಲ್ಲಿ ಹಾಕಿ ಮುಚ್ಚುವವರೆಗೂ ಏನೇನು ನಾಟಕಗಳು ನಡೆಯುತ್ತವೊ ನೋಡಬೇಕೆಂಬ ಕುತೂಹಲ ನನಗೆ ತೀವ್ರವಾಗಿದೆ.

ರಾತ್ರಿ ಮೂರು ಗಂಟೆ. ದಿವಸದ ಆರನೇ ಒಂದು ಭಾಗದಷ್ಟು ಕಾಲಕ್ಕೆ ಜಾವ ಎನ್ನುತ್ತಾರೆ. ಅಂದರೆ ನಾಲ್ಕು ಗಂಟೆಗೆ ಒಂದು ಜಾವ. ರಾತ್ರಿಯನ್ನು ಮೂರು ಜಾವಗಳಾಗಿ ವಿಂಗಡಿಸಿದರೆ 6ರಿಂದ10 ಮೊದಲ ಜಾವ. 10ರಿಂದ 02 ಎರಡನೆಯ ಜಾವ. 02 ರಿಂದ06 ಮೂರನೆಯ ಜಾವ. ಎರಡು ಮತ್ತು ಮೂರನೇ ಜಾವಗಳ ಮಧ್ಯದಲ್ಲಿ ಬರುವ ಮಧ್ಯಂತರ ಜಾವಗಳ ನಡುವೆ ದೆವ್ವಗಳು, ಆತ್ಮಗಳು, ಪ್ರೇತಾತ್ಮಗಳು ಎದ್ದು ನಡೆದಾಡುವ ಕೆಲವು ವಿಶೇಷ ಸಣ್ಣ ಜಾವಗಳೂ ಸೇರಿಕೊಂಡಿವೆ. ರಾತ್ರಿ ಭೂಮಿಯ ಮೇಲಿರುವ ಸಕಲ ಚರಾಚರಗಳು ಸತ್ತುಹೋಗಿರುವ ಸಮಯ. ಮತ್ತೆ ಬದುಕಿ ಬರುವುದಕ್ಕೆ ಮರುದಿನ ಸೂರ್ಯ ಹುಟ್ಟಿಬರಬೇಕು. ಅಂದರೆ ಭೂಮಿಯ ಮೇಲಿರುವ ಪ್ರತಿ ಪ್ರಾಣಿಯೂ ಪ್ರತಿ ದಿನವೂ ಪ್ರಾಣ ಪಡೆದುಕೊಂಡು ಪ್ರತಿ ರಾತ್ರಿ ಒಂದು ಸಲ ಸತ್ತೋಗಿ ಮತ್ತೆ ಮರುದಿನ ಪ್ರಾಣ ಪಡೆಯುತ್ತವೆ. ಈ ಎರಡೂ ಮ ಮತ್ತು ಮೂರನೇ ಜಾವಗಳಲ್ಲಿ ಕ್ಷುದ್ರ ಶಕ್ತಿಗಳೆಲ್ಲ ಜಾಗೃತಗೊಂಡು ಸಕ್ರಿಯವಾಗಿ ತೀವ್ರ ಚಟುವಟಿಕೆಗಳಲ್ಲಿ ತೊಡಗಿಕೊಳ್ಳುತ್ತವೆ. ಕತ್ತಲಲ್ಲಿ ಅಡಗಿ ಕುಳಿತಿದ್ದ ಜೀಸಸ್ ಕ್ರೈಸ್ತನ್ನು ಹಿಡಿದುಕೊಂಡಿದ್ದು ಅದೇ ಮೂರನೇ ಜಾವದಲ್ಲಿ. ಅನಂತರ ಮರು ದಿನ ಬೆಳಿಗ್ಗೆ ಒಂಬತ್ತು ಗಂಟೆಗೆ ಜೀಸಸ್ ಅನ್ನು ಶಿಲುಬೆಗೆ ಏರಿಸಲಾಯಿತು.

ಕ್ಷುದ್ರ ಶಕ್ತಿಗಳ ಸಾವಿನ ಗಂಟೆ ಮಧ್ಯರಾತ್ರಿ ಪ್ರಾರಂಭವಾಗಿ ಅದರ ಕೊನೆ ಘಟ್ಟ ಮೂರು ಗಂಟೆಗೆ ತೀವ್ರವಾಗುತ್ತದೆ. ಈ ಸಮಯ ಭೂಮಿಯ ಮೇಲೆ ಅಸಾಮಾನ್ಯ ಚಟುವಟಿಕೆಗಳು ನಡೆಯುವ ಸಮಯ. ಭೂಮಿಯ ಮೇಲೆ ಜನರು ಸಾಯುವುದು ದಿನಕ್ಕಿಂತ ರಾತ್ರಿ ಹೊತ್ತಿನಲ್ಲಿಯೆ ಹೆಚ್ಚು. ಅಕಾಲದಲ್ಲಿ ಮರಣ ಹೊಂದಿ ದೆವ್ವಗಳಾದವರು, ಬದುಕಿನಲ್ಲಿ ಯಾವುದನ್ನೂ ನೋಡದೆ ಅಪಘಾತಗಳಲ್ಲಿ ಪ್ರಾಣ ಕಳೆದುಕೊಂಡವರು, ತೃಪ್ತಿಯಿಲ್ಲದ ಪ್ರೇತಾತ್ಮಗಳಾಗಿ ಬದುಕಿರುವ ಜನರನ್ನು ಹಲವು ರೀತಿಯಲ್ಲಿ ಕಾಡುವ ಸಮಯಯಿದು. ಆತ್ಮಹತ್ಯೆಗಳು, ಕಳ್ಳತನಗಳು, ಅಪರಾಧಗಳು, ಆಸ್ಪತ್ರೆಗಳಲ್ಲಿ ಹೆಚ್ಚು ಜನರು ಸಾಯುವ ಸಮಯವೂ ಇದೆ. ರಸ್ತೆಗಳಲ್ಲಿ ಘೋರ ಅಪಘಾತಗಳು ನಡೆಯುವುದು ಇದೇ ಸಮಯದಲ್ಲಿ. ಜನರು ಹೆಚ್ಚು ಹಿಂಸೆಗೆ ಒಳಗಾಗುವುದು ಇದೇ ಕಾಲದಲ್ಲಿ. ಆತ್ಮಗಳು, ಪ್ರೇತಾತ್ಮಗಳು ದಿಕ್ಕು ತಪ್ಪಿ ಓಡಾಡುವುದು ಇದೇ ಕಾಲದಲ್ಲಿ. ರಾತ್ರಿ ಮೂರು ಗಂಟೆ ``Dead time' ಎಂಬುದಾಗಿ ಹೇಳುವುದು ಉಂಟು. ಈ ಸಮಯದಲ್ಲಿ ಸತ್ತುಹೋಗಿರುವ ಮತ್ತು ಬದುಕಿರುವವರ ಆತ್ಮಗಳು ಸಹ ಹೆಚ್ಚು ಕ್ರಿಯಾತ್ಮಕವಾಗಿರುತ್ತವೆ ಎನ್ನಲಾಗಿದೆ. ಈ ಸಮಯ ಭೂಮಿಯ ಮೇಲಿನ ಧ್ರುವೀಯ ವಿರುದ್ಧದ ಕಾಲ. ಪ್ರೇತಾತ್ಮಗಳು ಹೆಚ್ಚು ಸಂತೋಷ ಅನುಭವಿಸುವ ಕಾಲವೂ ಹೌದು. 3 ಗಂಟೆ 33ನೇ ನಿಮಿಷ ಇಹಪರ ಎರಡು ಲೋಕಗಳ ಮಧ್ಯೆ ತೆಳುವಾದ ಕಾಲವಾಗಿದ್ದು ಕ್ಷುದ್ರ ಶಕ್ತಿಗಳು ಎರಡೂ ಲೋಕಗಳ ಮಧ್ಯೆ ಸುಲಭವಾಗಿ ಓಡಾಡಬಹುದಾದ ಸಮಯವೂ ಕೂಡ ಇದೇ ಎನ್ನಲಾಗಿದೆ.

ನಾನು ಪ್ರಾಣ ಕಳೆದುಕೊಂಡಿದ್ದ ನನ್ನ ಆತ್ಮವೊ ಪ್ರೇತಾತ್ಮವೊ ಈಗ ಗೋಡೆಯ ಮೇಲೆ ಕುಳಿತಿದ್ದು ನಾನು ಬದುಕಿರುವಾಗ ಕೇಳಿದ್ದ ಆತ್ಮ ಮತ್ತು ಕ್ಷುದ್ರಶಕ್ತಿಗಳ ಕೆಲವು ಸಂಗತಿಗಳನ್ನು ನಿಮಗೆ ಹೇಳಿದೆ. ಆಧುನಿಕ ಭಾರತದ ಅತ್ಯಂತ ಪ್ರತಿಭಾವಂತ ಸನ್ಯಾಸಿ ಸ್ವಾಮಿ ವಿವೇಕಾನಂದರೂ ಕೂಡ ಆತ್ಮದ ಬಗ್ಗೆ ಹೀಗೆ ಹೇಳಿರುವುದನ್ನು ಕೇಳಿದ್ದೇನೆ. `ಮನುಷ್ಯನ ದೇಹದಿಂದ ಹಾದುಹೋಗುವ ಆತ್ಮವನ್ನು ಪ್ರೇತಾತ್ಮ ಎನ್ನುತ್ತಾರೆ. ಅದು ಹತ್ತು ದಿನಗಳ ಕಾಲ ಹಲವು ರೂಪಗಳಲ್ಲಿ ಅದೇ ಮನೆಯಲ್ಲಿ ಅಥವಾ ತಾನು ಬದುಕಿದ ಇಷ್ಟವಾದ ಸ್ಥಳಗಳಲ್ಲಿ ಸುತ್ತುತ್ತಿರುತ್ತದೆ. ಆ ಹತ್ತು ದಿನಗಳ ಕಾಲದಲ್ಲಿ ಅದು ಪ್ರೇತವಾಗಿ ರೂಪ ಧರಿಸಿರುತ್ತದೆ. ಪ್ರತಿ ದಿನವೂ ಆ ಪ್ರೇತಾತ್ಮ ತನ್ನ ಮೂಲ ದೇಹದ ತಲೆ ಕಣ್ಣು ಕೈಕಾಲುಗಳ ರೂಪ ಪಡೆದುಕೊಂಡು ಕಲ್ಲುಗಳ ಮೇಲೆ ತರ್ಪಣವಾಗಿ ಸುರಿಯುವ ಎಳ್ಳು, ನೀರನ್ನು ಸ್ವೀಕರಿಸುತ್ತದೆ. ಹನ್ನೊಂದನೇ ದಿನ ಪ್ರೇತಾತ್ಮ ಸಾವಿನ ದೇವರಾದ ಯಮನ ಲೋಕದ ಕಡೆಗೆ ಪ್ರಯಾಣ ಮಾಡುತ್ತದೆ' ಎನ್ನುತ್ತಾರೆ. ಆದರೆ ಇದು ಯಾವುದನ್ನೂ ನಾನು ಇದುವರೆಗೂ